ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

ದಿನಾಂಕ :

ವಿಷಯ: ಮತ್ತಿಕೆರೆ ಉಪವಿಭಾಗ, ವಾರ್ಡ್ ಸಂಖ್ಯೆ 36 ರ ವ್ಯಾಪ್ತಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸುವ ಸಂಬಂಧ ನಿಗಮದ ಸುಮಾರು 10500 ಚದುರ ಅಡಿ ಜಾಗವನ್ನು ಪಾಲಿಕೆಗೆ ಬದಲಿ ಜಾಗ ಅಥವಾ ಮಾರ್ಗಸೂಚಿ ಮೌಲ್ಯ ನೀಡುವ ಷರತ್ತಿನೊಂದಿಗೆ ನೀಡುವ ಬಗ್ಗೆ.

ಓದಿದೆ:
1. ಕವಿಪ್ರನಿನಿ/ಎಸ್‌ಎ8/ಬಿ7/68074/2017-18 ದಿನಾಂಕ 18/07/2017.
2. ಬಿಬಿಎಂಪಿ/ಆಯುಕ್ತರು/ಪಿಎಸ್‌ಆರ್/119/2021 ದಿನಾಂಕ 26/06/2020.
3. ಕವಿಪ್ರನಿನಿ/ವ್ಯ.ನಿ/ಹಿ.ಆ.ಕಾ/ಎಸ್‌ಎ8/ಬಿ7/68074/2017-18/156 ದಿನಾಂಕ 21/10/2020.
4. ಮು.ಆ/ಪಿಆರ್/5052/21-22 ದಿನಾಂಕ 29/03/2022.
5. ದಿನಾಂಕ 18/04/2022 ರಂದು ನಡೆದ 130 ನೇ ಕವಿಪ್ರನಿನಿ ಮಂಡಳಿ ನಿರ್ದೇಶಕರುಗಳ ಸಭೆಯ ನಡವಳಿಗಳು.

**ಪೀಠಿಕೆ:**

1. ಮತ್ತಿಕೆರೆ ಉಪವಿಭಾಗ, ವಾರ್ಡ್ ಸಂಖ್ಯೆ 36 ರ ವ್ಯಾಪ್ತಿಯಲ್ಲಿ ಸುಮಾರು 14-00 ಎಕರೆ ಜಾಗ ಕವಿಪ್ರನಿನಿಯ ಸ್ವಾಧೀನದಲ್ಲಿರುತ್ತದೆ. ಸದರಿ ಜಾಗವನ್ನು ಕವಿಪ್ರನಿನಿ ಭೂ ಸ್ವಾಧೀನದ ಮೂಲಕ ಪಡೆದುಕೊಂಡಿದ್ದು, ಸದರಿ ಜಾಗದಲ್ಲಿ 66/11ಕೆ.ವಿ ಉಪಕೇಂದ್ರ, ವಿದ್ಯುತ್ ಪರಿವರ್ತಕಗಳ ದುರಸ್ತಿ ಕೇಂದ್ರ, ವಸತಿ ಗೃಹಗಳು ಹಾಗೂ ಬೆವಿಕಂ ನ ಉಪವಿಭಾಗ ಕಚೇರಿ ಇತ್ಯಾದಿಗಳನ್ನು ನಿರ್ಮಿಸಲಾಗಿದೆ.

2. ಸದರಿ ಉಪಕೇಂದ್ರದ ಆವರಣದಲ್ಲಿ ಕರ್ನಾಟಕ ಸರ್ಕಾರದ ಆಯವ್ಯಯದಲ್ಲಿ ಘೋಷಣೆಯಾದ ಇಂದಿರಾ ಕ್ಯಾಂಟಿನ್ ಮತ್ತು ಇಂದಿರಾ ಅಡುಗೆ ಕೇಂದ್ರಗಳ ನಿರ್ಮಾಣಕ್ಕೆ ಸರ್ಕಾರದ ನಿರ್ದೇಶನದ ಮೇರೆಗೆ ಸುಮಾರು 4000 ಚದುರ ಅಡಿಗಳಷ್ಟು ಜಾಗವನ್ನು ನೀಡಲಾಗಿದೆ. ಸದರಿ ಜಾಗದ ಮಾಲೀಕತ್ವದ ಹಕ್ಕನ್ನು ನಿಗಮದ ಹೆಸರಿನಲ್ಲೇ ಉಳಿಸಿಕೊಂಡು ಇಂದಿರಾ ಕ್ಯಾಂಟಿನ್ ನಿರ್ಮಿಸಲು ಅನುಮತಿ ನೀಡಲಾಗಿದೆ.

3. ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ಸದರಿ ಆವರಣದಲ್ಲಿ ಘನತ್ಯಾಜ್ಯ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲು *Secondary collection point transfer station* ನಿರ್ಮಿಸಲು 100 ಅಡಿ X 200 ಅಡಿ ಖಾಲಿ ಜಾಗವನ್ನು ಉಚಿತವಾಗಿ ಪಾಲಿಕೆಗೆ ನೀಡಲು ಈ ಹಿಂದೆ ಕೋರಿಕೆ ಸಲ್ಲಿಸಿದ್ದರು.

4. ಸದರಿ ಉಪಕೇಂದ್ರದ ಆವರಣದಲ್ಲಿ 220/66ಕೆ.ವಿ ಜಿಐಎಸ್ ಉಪಕೇಂದ್ರ ಸ್ಥಾಪಿಸುವ ಯೋಜನೆ ದಿನಾಂಕ 04/10/2019 ರಂದು ನಡೆದ 82 ನೇ ತಾಂತ್ರಿಕ ಸಮನ್ವಯ ಸಮಿತಿಯ ಸಭೆಯಲ್ಲಿ ಅನುಮೋದನೆ ನೀಡಲಾಗಿದ್ದು, ಸದರಿ ಯೋಜನೆಯ ಕಾಮಗಾರಿ ನಿರ್ವಹಿಸಲು ಗುತ್ತಿಗೆದಾರರಾದ ಮೆ॥ ಎಲ್ & ಟಿ ಲಿಮಿಟೆಡ್, ರವರಿಗೆ ಕಾರ್ಯಾದೇಶ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ, ಘನತ್ಯಾಜ್ಯ ನಿರ್ವಹಣೆಗೆ ಮಹಾನಗರ ಪಾಲಿಕೆ ಕೋರಿದ್ದ 100 ಅಡಿ X 200 ಅಡಿ ಖಾಲಿ ಜಾಗವನ್ನು ನೀಡಲು ಸಾಧ್ಯವಿಲ್ಲವೆಂದು ಪಾಲಿಕೆಯ ಮುಖ್ಯ ಆಯುಕ್ತರಿಗೆ ವ್ಯವಸ್ಥಾಪಕ ನಿರ್ದೇಶಕರಿಂದ ದಿನಾಂಕ 21/10/2020 ರ ಅರೆ ಸರ್ಕಾರಿ ಪತ್ರದಲ್ಲಿ ತಿಳಿಸಲಾಗಿದೆ.

5. ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ದಿನಾಂಕ 29/03/2022 ರ ಪತ್ರದಲ್ಲಿ ಮತ್ತಿಕೆರೆ ಉಪವಿಭಾಗ ವಾರ್ಡ್ ಸಂಖ್ಯೆ 36 ರಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸಲು ಮಾನ್ಯ ಸಚಿವರು ನಿರ್ದೇಶಿಸಿರುವ ಕಾರಣ, ಸದರಿ ಆವರಣದಲ್ಲಿ ಹಾಲಿ ಇರುವ ಇಂದಿರಾ ಕ್ಯಾಂಟಿನ್ ಪಕ್ಕದಲ್ಲಿ ಸುಮಾರು 10500 ಚದುರ ಅಡಿಗಳ ಜಾಗವನ್ನು ಪಾಲಿಕೆಗೆ ಹಸ್ತಾಂತರಿಸಲು ಕೋರಿರುತ್ತಾರೆ. ಸದರಿ ಆವರಣದಲ್ಲಿ ಮಹಾನಗರ ಪಾಲಿಕೆ ಕೋರಿರುವ ಜಾಗ ಉದ್ದೇಶಿತ 220/66ಕೆ.ವಿ ಜಿಐಎಸ್ ಉಪಕೇಂದ್ರ ಸ್ಥಾಪಿಸುವ ಯೋಜನೆಗೆ ಅಡಚಣೆಯಾಗುವುದಿಲ್ಲ.

6. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕೋರಿರುವ ಜಾಗದ ಇತ್ತೀಚಿನ ಮಾರ್ಗಸೂಚಿ ಬೆಲೆ ಚದುರ ಅಡಿಗೆ ರೂ.7,126/– ಗಳಾಗಿದ್ದು, ಪಾಲಿಕೆ ಕೋರಿರುವ 10500 ಚದುರ ಅಡಿ ಜಾಗದ ಒಟ್ಟು ಮಾರ್ಗಸೂಚಿ ಮೌಲ್ಯ ರೂ7,48,23,000/– ಗಳಾಗಿರುತ್ತದೆ.

7. ಬೆಂಗಳೂರು ನಗರದ Central Business District (ಸಿಬಿಡಿ) ಯಲ್ಲಿ ವಿದ್ಯುತ್ ಜಾಲವನ್ನು ಬಲಪಡಿಸಲು, ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 66/11ಕೆ.ವಿ ಜಿಐಎಸ್ ಉಪಕೇಂದ್ರ ಸ್ಥಾಪಿಸಬೇಕಾಗಿದ್ದು, ಪಾಲಿಕೆಯ ಅಧೀನದಲ್ಲಿರುವ ಸರಿಸುಮಾರು 10500 ಚದುರ ಅಡಿ ವಿಸ್ತೀರ್ಣದ ಜಾಗವನ್ನು ನಿಗಮಕ್ಕೆ ಹಸ್ತಾಂತರಿಸುವ ಷರತ್ತಿನೊಂದಿಗೆ ಮತ್ತಿಕೆರೆ ಉಪಕೇಂದ್ರದ ಆವರಣದಲ್ಲಿ ಕೋರಿರುವ 10500 ಚದುರ ಅಡಿ ಜಾಗವನ್ನು ಪಾಲಿಕೆಯೊಂದಿಗೆ ಅದಲುಬದಲು ಮಾಡಿಕೊಳ್ಳುವ ಅಥವಾ ನಿಗಮದ ಉಪಕೇಂದ್ರ ಸ್ಥಾಪಿಸಲು ಪಾಲಿಕೆಯ ಅಧೀನದಲ್ಲಿ ಸೂಕ್ತ ಜಾಗದ ಲಭ್ಯತೆ ಇಲ್ಲದಿದ್ದಲ್ಲಿ ನಿಗಮ ಹಸ್ತಾಂತರಿಸುವ ಜಾಗಕ್ಕೆ ಮಾರ್ಗಸೂಚಿ ಬೆಲೆಯಂತೆ ಒಟ್ಟು ಮೌಲ್ಯ ಪಾವತಿಸುವ ಅಥವಾ ಸದರಿ ಮೊತ್ತಕ್ಕೆ ಸಮನಾಗಿ ನಿಗಮ ಪಾವತಿಸಬೇಕಾದ ಆಸ್ತಿ ತೆರಿಗೆ / ವಿದ್ಯುತ್ ಕೇಬಲ್ ಅಳವಡಿಕೆಗೆ ರಸ್ತೆ ಕತ್ತರಿಸುವ ಶುಲ್ಕಕ್ಕೆ ಹೊಂದಾಣಿಕೆ ಮಾಡಿಕೊಳ್ಳುವ ಷರತ್ತಿನೊಂದಿಗೆ ಸದರಿ ಜಾಗವನ್ನು ನೀಡುವ ಪ್ರಸ್ತಾವನೆಯನ್ನು ದಿನಾಂಕ 18/04/2022 ರಂದು ನಡೆದ 130 ನೇ ಮಂಡಳಿ ಸಭೆಯಲ್ಲಿ ಮಂಡಿಸಲಾಗಿತ್ತು.

8. ಕವಿಪ್ರನಿನಿ ಮಂಡಳಿ ಸಭೆಯಲ್ಲಿ ಸದರಿ ಪ್ರಸ್ತಾವನೆಯ ಮೇಲೆ ಈ ಕೆಳಕಂಡಂತೆ ನಿರ್ಣಯ ತೆಗೆದುಕೊಳ್ಳಲಾಗಿದೆ.

*"RESOLVED THAT for the reasons explained above, approval be and is hereby accorded to handover the identified KPTCL's land to an extent of 10500 Sq.Ft at Mathikere substaion premises adjacent to Indira Canteen, for construction of Multi Speciality Hospital, subject to the following conditions:*

1) *BBMP shall hand over an equal extent of land in Malleshwaram Assembly constituency.*

*OR*

2) *BBMP shall make payment of Guidance Value of the land to be spared to them.*

*OR*

3) *BBMP shall adjust the said amount with property tax/ road cutting charges to be paid by KPTCL to BBMP.*

*FURTHER RESOLVED THAT Director (Admin, & HR), KPTCL be and is hereby authorized to issue necessary orders acordingly".*

9. ಈ ಹಿನ್ನೆಲೆಯಲ್ಲಿ, ಕೆಳಕಂಡಂತೆ ಆದೇಶಿಸಲಾಗಿದೆ.

**ಕವಿಪ್ರನಿನಿ/ಆದೇಶ ಸಂಖ್ಯೆ: ಬಿ7/68074/17-18/ ಬೆಂಗಳೂರು** **ದಿನಾಂಕ 17/06/2022**

ದಿನಾಂಕ 18/04/2022 ರ 130 ನೇ ಕವಿಪ್ರನಿನಿ ಮಂಡಳಿ ಸಭೆಯ ನಡವಳಿಯನ್ವಯ ಮತ್ತಿಕೆರೆ ಉಪವಿಭಾಗ, ವಾರ್ಡ್ ಸಂಖ್ಯೆ 36 ರ ವ್ಯಾಪ್ತಿಯಲ್ಲಿನ ಕವಿಪ್ರನಿನಿಯ ಆವರಣದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸುವ ಸಂಬಂಧ ಸದರಿ ಆವರಣದಲ್ಲಿ ಈಗಾಗಲೆ ನಿರ್ಮಿಸಿರುವ ಇಂದಿರಾ ಕ್ಯಾಂಟಿನ್ ನ ಪಕ್ಕದಲ್ಲಿ 10500 ಚದುರ ಅಡಿ ಜಾಗವನ್ನು ಪಾಲಿಕೆಗೆ ಈ ಕೆಳಕಂಡ ಷರತ್ತುಗಳನ್ವಯ ನೀಡಲು ನಿಗಮ ಅನುಮೋದಿಸಿದೆ.

1. ಸದರಿ ಜಾಗದ ಬದಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 66/11ಕೆ.ವಿ ಜಿಐಎಸ್ ಉಪಕೇಂದ್ರ ಸ್ಥಾಪಿಸಲು ಸೂಕ್ತವಾದ 10500 ಚದುರ ಅಡಿ ವಿಸ್ತೀರ್ಣದ ಜಾಗವನ್ನು ಯಾವುದೆ ಮೊತ್ತ ವಿಧಿಸದೆ ನಿಗಮಕ್ಕೆ ಹಸ್ತಾಂತರಿಸುವುದು.

ಅಥವಾ

2. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಅಧೀನದಲ್ಲಿ ಸೂಕ್ತ ಜಾಗದ ಲಭ್ಯತೆ ಇಲ್ಲದಿದ್ದಲ್ಲಿ ನಿಗಮ ಹಸ್ತಾಂತರಿಸುವ ಜಾಗಕ್ಕೆ ಇತ್ತೀಚಿನ ಮಾರ್ಗಸೂಚಿ ಬೆಲೆಯಂತೆ ನಿಗಮ ಹಸ್ತಾಂತರಿಸುವ 10500 ಚದುರ ಅಡಿ ಜಾಗದ ಒಟ್ಟು ಮೌಲ್ಯವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕವಿಪ್ರನಿನಿಗೆ ಪಾವತಿಸುವುದು.

ಅಥವಾ

3. ನಿಗಮ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸುವ 10500 ಚದುರ ಅಡಿ ವಿಸ್ತೀರ್ಣದ ಇತ್ತೀಚಿನ ಮಾರ್ಗಸೂಚಿ ಬೆಲೆಯಂತೆ ಒಟ್ಟು ಮೌಲ್ಯಕ್ಕೆ ಸರಿಹೊಂದುವಂತೆ ನಿಗಮ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಪಾವತಿಸಬೇಕಾದ ಆಸ್ತಿ ತೆರಿಗೆ/ ರಸ್ತೆ ಕತ್ತರಿಸುವ ಸಂಬಂಧ ಪಾವತಿಸಬೇಕಾದ ಶುಲ್ಕದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸುವ ಮತ್ತಿಕೆರೆ ಉಪಕೇಂದ್ರದ ಆವರಣದಲ್ಲಿನ 10500 ಚದುರ ಅಡಿ ವಿಸ್ತೀರ್ಣದ ಜಾಗದ ಮೌಲ್ಯಕ್ಕೆ ಸರಿಹೊಂದುವ ಬದಲಿ ಜಾಗ ನೀಡುವ /ಮಾರ್ಗಸೂಚಿ ಮೌಲ್ಯ ಪಾವತಿಸುವ/ಸದರಿ ಮೊತ್ತವನ್ನು ಆಸ್ತಿ ತೆರಿಗೆ ಅಥವಾ ರಸ್ತೆ ಕತ್ತರಿಸುವ ಶುಲ್ಕಕ್ಕೆ ಹೊಂದಾಣಿಕೆ ಮಾಡಿಕೊಳ್ಳುವ ಯಾವುದಾದರೂ ಒಂದು ಪ್ರಸ್ತಾವನೆಯ ಸಂಬಂಧ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೊಂದಿಗೆ ಒಪ್ಪಂದ ಮಾಡಿಕೊಂಡ ನಂತರ, ಸದರಿ ಜಾಗವನ್ನು ಪಾಲಿಕೆಗೆ ಹಸ್ತಾಂತರಿಸಲು ಕ್ರಮಕೈಗೊಳ್ಳುವುದು.

ಸದರಿ ಜಾಗದ ಸಂಬಂಧ ನಿಯಮಾನುಸಾರ ಮಾಡಿಕೊಂಡ ಒಪ್ಪಂದ ಕರಾರಿನ ವಿವರಗಳನ್ನು ಸಂಬಂಧಪಟ್ಟ ಟಿಎಲ್ ಮತ್ತು ಎಸ್‌ಎಸ್ ವಿಭಾಗದ ಆಸ್ತಿ ಪುಸ್ತಕದಲ್ಲಿ, ಅಗತ್ಯ ದಾಖಲಾತಿಗಳನ್ನು ಮಾಡುವುದು.

ಆದೇಶದ ಮೇರೆಗೆ

ನಿರ್ದೇಶಕರು (ಆ ಮತ್ತು ಮಾ.ಸಂ)
ಕವಿಪ್ರನಿನಿ, ಬೆಂಗಳೂರು.

**ಪ್ರತಿಗಳು:-**

1. ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
2. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು.
3. ಮುಖ್ಯ ಇಂಜಿನಿಯರ್ (ವಿ), (ಯೋ ಮತ್ತು ಸ)/(ಟಿಎ ಮತ್ತು ಕ್ಯೂಸಿ), ಕವಿಪ್ರನಿನಿ, ಬೆಂಗಳೂರು.
4. ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ) /(ಆಂತರಿಕ ಪರಿಶೋಧನೆ), ಕವಿಪ್ರನಿನಿ.
5. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
6. ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಕಾ) ವೃತ್ತ, ಕವಿಪ್ರನಿನಿ, ಬೆಂಗಳೂರು.
7. ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ನಿ) ವೃತ್ತ, ಬಿಎಂಎಜಡ್ (ಉತ್ತರ), ಕವಿಪ್ರನಿನಿ, ಬೆಂಗಳೂರು
8. ಅಧೀಕ್ಷಕ ಇಂಜಿನಿಯರ್ (ಸಿವಿಲ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
9. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ ಮತ್ತು ಎಂಐಎಸ್) – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು
10. ಲೆಕ್ಕ ನಿಯಂತ್ರಣಾಧಿಕಾರಿ, ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು.
11. ಲೆಕ್ಕ ನಿಯಂತ್ರಣಾಧಿಕಾರಿ (ಲೆಕ್ಕಗಳು), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
12. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಟಿಎಲ್ ಮತ್ತು ಎಸ್‌ಎಸ್ ವಿಭಾಗ, ಪೀಣ್ಯಾ, ಕವಿಪ್ರನಿನಿ, ಬೆಂಗಳೂರು.
13. ಕಾರ್ಯನಿರ್ವಾಹಕ ಇಂಜಿನಿಯರ್ (ಸಿವಿಲ್), ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು.
14. ಉಪಲೆಕ್ಕ ನಿಯಂತ್ರಣಾಧಿಕಾರಿ (ಆಂತರಿಕ ಪರಿಶೋಧನೆ), ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು.
15. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಆ ಮತ್ತು ಮಾ. ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
16. ಲೆಕ್ಕಾಧಿಕಾರಿ (ಕೋಡೀಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.